ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಅಂಕೋಲಾ

ಸಿಸಿ ನಂಬರ. 1069/2021

ಸಿ ಡಬ್ಲ್ಯೂ-17

ಪಿ ಡಬ್ಲ್ಯೂ- 7

ದಿಃ 14-11-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

| | |
|---|---|
| ಸಾಕ್ಷಿಯ ಹೆಸರುಃ | ಪ್ರವೀಣಕುಮಾರ |
| ತಂದೆಯ ಹೆಸರುಃ | ರಾಮಚಂದ್ರ |
| ವಯಸ್ಸುಃ | 38 ವರ್ಷ |
| ಉದ್ಯೋಗಃ | ಪಿ.ಎಸ್.ಐ |
| ವಿಳಾಸಃ | ಕೋಟಾ, ಉಡುಪಿ |

ಮುಖ್ಯ ವಿಚಾರಣೆ: ಮಾನ್ಯ ಎ ಪಿ ಪಿ ರವರಿಂದಃ

ನಾನು ದಿಃ18-06-2021 ರಿಂದ ದಿಃ30-01-2023 ರವರೆಗೆ ಅಂಕೋಲಾ ಪೋಲೀಸ್ ಠಾಣೆಯಲ್ಲಿ ಪಿ.ಎಸ್.ಐ. ಆಗಿ ಕರ್ತವ್ಯವನ್ನು ನಿರ್ವಹಿಸಿರುತ್ತೇನೆ.

2. ದಿಃ 30-07-2021 ರಂದು ಸಂಜೆ 7.15 ಗಂಟೆಗೆ ಚಾಸಾ-1 ರವರು ನೀಡಿದ ಲಿಖಿತ ದೂರನ್ನು ಸ್ವೀಕರಿಸಿಕೊಂಡು, ಠಾಣಾ ಗುನ್ನಾ ನಂ.115/2021 ಕಲಂ. 279, 338 ಮತ್ತು 304ಎ ನೆದ್ದರಂತೆ ಪ್ರಕರಣ ದಾಖಲಿಸಿಕೊಂಡು, ಪ್ರಥಮ ವರ್ತಮಾನ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟಿರುತ್ತೇನೆ. ಸಾಕ್ಷಿಯು ನಿಪಿ-1 ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-1ಬಿ

ಎಂದು ಗುರುತಿಸಲಾಯಿತು. ಸಾಕ್ಷಿಯು ಪ್ರಥಮ ವರ್ತಮಾನ ವರದಿ ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಪ್ರಥಮ ವರ್ತಮಾನ ವರದಿ ನಿಪಿ-8, ಸಾಕ್ಷಿಯ ಸಹಿಯನ್ನು ನಿಪಿ-8ಎ ಎಂದು ಗುರುತಿಸಲಾಯಿತು. ಅದೇ ದಿನ ಸಂಜೆ 8 ಗಂಟೆಗೆ ಅಂಕೋಲಾ ಸರಕಾರಿ ಆಸ್ಪತ್ರೆಯ ಶವ ಪಂಚನಾಮೆ ಜರುಗಿಸಲು ಪಂಚರಿಗೆ ನೋಟೀಸು ಜಾರಿ ಮಾಡಿ, ಶವಪಂಚನಾಮೆಯನ್ನು ರಾತ್ರಿ 8 ರಿಂದ 9.30 ಗಂಟೆಯವರೆಗೆ ಜರುಗಿಸಿರುತ್ತೇವೆ. ಸಾಕ್ಷಿಯು ಶವಪಂಚನಾಮೆಯ ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಶವಪಂಚನಾಮೆಯನ್ನು ನಿಪಿ-9, ಸಾಕ್ಷಿಯ ಸಹಿಯನ್ನು ನಿಪಿ-9ಎ ಎಂದು ಗುರುತಿಸಲಾಯಿತು. ಫೋಟೋ ತೆಗೆಯಲಾಯಿತು. ಸಾಕ್ಷಿಯು ಫೋಟೋವಿನ ನೋಡಿ ಗುರುತಿಸಿದ್ದು, ಫೋಟೋವನ್ನು ಪುರಾವೆಗೆ ಒಳಪಟ್ಟು ನಿಪಿ-10 ಎಂದು ಗುರುತಿಸಲಾಯಿತು. ನಂತರ ವರದಿಯನ್ನು ತಯಾರಿಸಿಕೊಂಡಿರುತ್ತೇವೆ. ಸಾಕ್ಷಿಯು ವರದಿಯ ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ವರದಿಯನ್ನು ನಿಪಿ-11 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-11ಎ ಎಂದು ಗುರುತಿಸಲಾಯಿತು. ನಂತರ ಪೋಸ್ಟ ಮಾಟಮ್ ನಡೆಸಲು ಚಾಸಾ-14 ರವರಿಗೆ ಪತ್ರವನ್ನು ನೀಡಿರುತ್ತೇವೆ. ಸಾಕ್ಷಿಯು ವೈದ್ಯಾಧಿಕಾರಿಗೆ ನೀಡಿದ ಕೋರಿಕೆ ಪತ್ರದ ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಕೋರಿಕೆ ಪತ್ರವನ್ನು ನಿಪಿ-12 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-12 ಎ ಎಂದು ಗುರುತಿಸಲಾಯಿತು. ನಂತರ ಮುಂದಿನ ತನಿಖೆಗಾಗಿ ಚಾಸಾ-18 ರವರಿಗೆ ಕಡತವನ್ನು ವಹಿಸಿಕೊಟ್ಟಿರುತ್ತೇನೆ.

<u>ಪಾಟೀ ಸವಾಲುಃ</u> ಆರೋಪಿ ಪರ ವಕೀಲರಾದ ಶ್ರೀ ವಿ.ವಿ.ಎಸ್ ಇವರಿಂದಃ

3. ಫಿರ್ಯಾದಿ ಸುಳ್ಳು ಎಂದು ಗೊತ್ತಿದ್ದರೂ ಸಹ ಮೃತನ ಕುಟುಂಬದವರಿಗೆ ಹಾಗೂ ಗಾಯಾಳುಗಳಿಗೆ ಪರಿಹಾರ ಕೊಡಿಸಬೇಕು ಎಂಬ ಉದ್ದೇಶದಿಂದ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೀರಿ ಎಂದರೆ ಸರಿಯಲ್ಲ. ಅಪಘಾತವಾಯಿತು ಎಂದು ಹೇಳುವ ರಸ್ತೆಯ ಮೇಲೆ ನೀವು ಓಡಾಡಿರುತ್ತೀರಿ ಎಂದರೆ ಸರಿ. ನಿಡಿ–2 ಫೋಟೋದಲ್ಲಿ ಯು ಟರ್ನಕ್ಕಿಂತ ಮುಂಚೆ ಇರುವ ರಸ್ತೆಯು ಅಗಲವಿದ್ದು, ಮುಂದೆ ಹೋಗುತ್ತಾ ಬಾರೀಕು ಆಗಿರುತ್ತದೆ ಎಂದರೆ ಸರಿ. ಇಂತಹ ಯು ಟರ್ನ ಇದ್ದಲ್ಲಿ ಸಾಮಾನ್ಯವಾಗಿ ರಸ್ತೆ ಅಗಲವಿರುತ್ತದೆ ಎಂದರೆ ಸರಿ. ನಿಡಿ–3 ಫೋಟೋದಲ್ಲಿ Stop ಎಂದು ಬರೆದಿರುವ ಜಾಗವು ಅಗಲವಾಗಿದೆ ಎಂದರೆ ಸರಿ. ನಿಡಿ–4ಫೋಟೋದಲ್ಲಿ Stop ಎಂದು ಬರೆದಿರುವ ಸ್ವಲ್ಪ ಹಿಂಬದಿಯಲ್ಲಿ 2 ಗುರುತುಗಳು ಇದ್ದು, ಅಂಕೋಲಾ ಕಡೆಗೆ ಹೋಗುವವರು ಸೀದಾ ಹೋಗಬೇಕಾಗಿದ್ದು, ಯು ಟರ್ನ ಮಾಡುವವರು ತಿರುಗು ಗುರುತು ತೋರಿಸಿದ ಬದಿಯಲ್ಲಿ ಹೋಗಬೇಕಾಗುತ್ತದೆ ಎಂದರೆ ಸರಿ. ಸದರಿ ಫೋಟೋಗಳು ನೀವು ಹೇಳುವ ಅಪಘಾತವಾಯಿತು ಎಂದು ಹೇಳುವ ಸ್ಥಳ ಎಂದರೆ ಸರಿ. ನಿಡಿ–7 ರಲ್ಲಿ ಅಂಕೋಲಾ ಕಡೆಗೆ ಹೋಗುವವರು ಸೀದಾ ಹೋಗಬೇಕು ಹಾಗೂ ಯು ಟರ್ನ ತೆಗೆದುಕೊಳ್ಳುವವರು ಬಲಕ್ಕೆ ಹೋಗಬೇಕು ಎಂದು ಗುರುತು ಇರುತ್ತದೆ ಎಂದರೆ ಸರಿ. ನೀವು ಇಂದು ಗುರುತುಪಡಿಸಿದ ದಾಖಲಾತಿಗಳನ್ನು ಈ ಪ್ರಕರಣಕ್ಕೆ ಪೂರಕವಾಗುವಂತೆ ಸೃಷ್ಟಿ ಮಾಡಿಕೊಂಡಿರುತ್ತೀರಿ ಎಂದರೆ ಸರಿಯಲ್ಲ. ನೀವು ಸುಳ್ಳು ಪ್ರಕರಣಕ್ಕೆ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಆರೋಪಿಯ ಯಾವುದೇ ತಪ್ಪು ಇಲ್ಲದಿದ್ದರೂ ಸಹ

ಆರೋಪಿ ವಿರುದ್ಧ ಸುಳ್ಳು ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿರುತ್ತೀರಿ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ).

ಓ ಹೇ ಕೇ ಸರಿ ಇದೆ

ಹೆಚ್ಚುವರಿ ಜೆ.ಎಂ.ಎಫ್.ಸಿ., ಅಂಕೋಲಾ.